# ಪ್ರಕರಣ ಅಧ್ಯಯನ

ರಾಮಾಪುರ ಎಂಬ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರುಗಳಾದ ಶಿವಲಿಂಗಯ್ಯರವರು ಒಂದು ದಿನ ಶಿಕ್ಷಕರ ಸಭೆಯನ್ನು ಕರೆದರು. ಎಲ್ಲಾ ಶಿಕ್ಷಕರುಗಳು ವೃತ್ತಾಕಾರದಲ್ಲಿ ಕುಳಿತರು. ಮುಖ್ಯ ಶಿಕ್ಷಕರು ಸಹ ಶಿಕ್ಷಕರಿಂದ ಈ ಬಾರಿ ತಮ್ಮ ಶಾಲೆಯಲ್ಲಿ ನಡೆಯುವ ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕಾಗಿ ಈಗಾಗಲೇ ಮಾಡಿರುವ ತಯಾರಿಗಳ ಬಗ್ಗೆ ಹಂಚಿಕೊಳ್ಳಲು ತಿಳಿಸಿದರು. ಸಹ ಶಿಕ್ಷಕರು ತಾವು ಇಲ್ಲಿಯವರೆಗೆ ಮಾಡಿದ ಕಾರ್ಯಗಳನ್ನು ಹಂಚಿಕೊಂಡರು ಜೊತೆಗೆ ಮುಂದೆ ಮಾಡಬೇಕಾಗಿರುವ ಕೆಲಸಗಳ ಬಗ್ಗೆ ಚರ್ಚಿಸಿದರು. ನಂತರ ಮುಖ್ಯ ಶಿಕ್ಷಕರು ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ಬೇರೆ ಶಾಲೆಯ ಮಕ್ಕಳು ಬರುವುದರಿಂದ ಯಾವೆಲ್ಲ ಸಮಸ್ಯೆಗಳು ಎದುರಾಗಬಹುದು, ಆದಕ್ಕಾಗಿ ಎನೆಲ್ಲಾ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕಾಗಬಹುದು ಎಂದು ಸಹ ಶಿಕ್ಷಕರೊಂದಿಗೆ ಸಂವಾದಿಸಿದರು.

ಈ ಹಿಂದೆ ನಡೆದಿರುವ ಪ್ರತಿಭಾ ಕಾರಂಜಿ ಕಾರ್ಯಕ್ರಮದ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಸಹ ಶಿಕ್ಷಕರಿಗೆ ಮುಖ್ಯ ಶಿಕ್ಷಕರು ಕೇಳಿದರು. ಆಗ ಸಹಶಿಕ್ಷಕರು ತಮ್ಮ ಅನಿಸಿಕೆ/ಅಭಿಪ್ರಾಯ ಮತ್ತು ಸವಿನೆನಪುಗಳನ್ನು ಹಂಚಿಕೊಂಡರು.

ನಂತರ ಮುಖ್ಯಶಿಕ್ಷಕರು ಕಳೆದ ವಾರ ಮಾಡಿದ ಸಮುದಾಯದತ್ತ ಶಾಲೆ ಕಾರ್ಯಕ್ರಮ ತುಂಬಾ ಚೆನ್ನಾಗಿತ್ತು ಸಾಕಷ್ಟು ಪೋಷಕರು, ಸಮುದಾಯದವರು ಪಾಲ್ಗೊಂಡಿದ್ದರು, ಊಟದ ವ್ಯವಸ್ಥೆ ಅಚ್ಚುಕಟ್ಟಾಗಿ ಆಗಿತ್ತು, ಮಕ್ಕಳ ಕಲಿಕೆ ಕುರಿತು ಪೋಷಕರೊಂದಿಗಿನ ಸಂವಾದ ಪರಿಣಾಮಕಾರಿಯಾಯಿತು, ಕಾರ್ಯಕ್ರಮದ ಸಮಯ ಪಾಲನೆ ಉತ್ತಮವಾಗಿತ್ತು ಇದೆಲ್ಲ ತಂಡಕಾರ್ಯ ಮತ್ತು ನಿಮ್ಮ ಸಹಯೋಗದಿಂದ ಸಾಧ್ಯವಾಯಿತು ಎಂದು ಹೆಮ್ಮೆಯಿಂದ ಹಂಚಿಕೊಂಡರು.

ಸಭೆಯ ನಂತರ ಸಹ ಶಿಕ್ಷಕರೆಲ್ಲರೂ ತಮ್ಮ ತಮ್ಮ ತರಗತಿಗಳಿಗೆ ತೆರಳಿದರು. ಮುಖ್ಯ ಶಿಕ್ಷಕರು ತಾವು ಮಾಡಬೇಕಾಗಿರುವ ಕಾರ್ಯಗಳ ಬಗ್ಗೆ ಯೋಚಿಸುತ್ತಾ ತಮ್ಮ ಕೊಠಡಿಗೆ ಹೋದರು. ಸ್ವಲ್ಪ ಸಮಯದ ನಂತರ ಸಹ ಶಿಕ್ಷಕರೊಬ್ಬರು ಘಟಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯೊಂದಿಗೆ ಮುಖ್ಯ ಶಿಕ್ಷಕರ ಕೊಠಡಿಗೆ ಬರುತ್ತಾರೆ. ಮುಖ್ಯ ಶಿಕ್ಷಕರು ಸಹ ಶಿಕ್ಷಕರಿಗೆ ಕುಳಿತುಕೊಳ್ಳಲು ಹೇಳುತ್ತಾ ಪ್ರಶ್ನೆ ಪತ್ರಿಕೆಯನ್ನು ಗಮನಿಸಿದರು. ಮುಖ್ಯ ಶಿಕ್ಷಕರು "ನಿಮ್ಮ ಪ್ರಶ್ನೆ ಪ್ರತಿಕೆ ತುಂಬಾ ಚೆನ್ನಾಗಿದೆ. ಇದರಲ್ಲಿ ನಿಮ್ಮ ಆಸಕ್ತಿ ಮತ್ತು ಕ್ರಿಯಾಶೀಲತೆ ಕಾಣುತ್ತಿದೆ ನಿಮ್ಮ ಶ್ರಮದ ಬಗ್ಗೆ ಹೆಮ್ಮೆ ಅನಿಸುತ್ತದೆ' ಎಂದು ಹೇಳಿದರು. ಆದಕ್ಕೆ ಸಹ ಶಿಕ್ಷಕರು 'ನಿಮ್ಮ ಬೆಂಬಲ ಒಂದಿದ್ದರೆ ಸಾಕು ಸರ್ ಇನ್ನಷ್ಟು ಕಾರ್ಯಗಳನ್ನು ಅಚ್ಚುಕಟ್ಟಾಗಿ ಮಾಡುತ್ತೇವೆ' ಎಂದು ಹೇಳಿದರು. ಮುಖ್ಯ ಶಿಕ್ಷಕರು ನೀವು ಮಾಡುತ್ತಿರುವ ಎಲ್ಲಾ ಕೆಲಸಗಳು ಶಾಲೆಯ ಒಳಿತಿಗೆ ಪೂರಕವಾಗಿವೆ ಸ್ವಲ್ಪ ಸಮಯದ ನಿರ್ವಹಣೆ ಬಗ್ಗೆ ಗಮನಕೊಡಿ ಅಂದರೆ ಬೆಳಿಗ್ಗೆ ಸಮಯಕ್ಕೆ ಸರಿಯಾಗಿ ಬಂದರೂ ಸಾಕು ಎಂದು ಹೇಳಿದರು. ತಕ್ಷಣ ಸಹ ಶಿಕ್ಷಕರು ಆಗಲಿ ಸರ್ ಎಂದು ಹೇಳಿ ತರಗತಿಗೆ ಹೋದರು.

ಮುಖ್ಯ ಶಿಕ್ಷಕರು ಪ್ರತಿಭಾ ಕಾರಂಜಿ ಕಾರ್ಯಕ್ರಮದ ಒಂದು ವಾರದ ಮುಂಚೆ ಪುನ ಶಿಕ್ಷಕರ ಸಭೆ ಕರೆದರು. ಶಿಕ್ಷಕರೆಲ್ಲರೂ ತಾವು ಮಾಡಿರುವ ಕಾರ್ಯಗಳ ಬಗ್ಗೆ ಹಂಚಿಕೊಂಡರು. ಸಹ ಶಿಕ್ಷಕರು ಕೆಲವೊಂದು ಕಾರ್ಯಗಳು ಮಾಡುವುದಿದೆ ಎಂದಾಗ ಮುಖ್ಯ ಶಿಕ್ಷಕರು ಯಾರಿಗೆ ನನ್ನಿಂದ ಏನಾದರೂ ಸಹಾಯದ ಅವಶ್ಯಕತೆ ಇದ್ದಲ್ಲಿ, ನಾನು ಸಿದ್ದ ಎಂದು ತಿಳಿಸುತ್ತಾ ಸಭೆಯನ್ನು ಕೊನೆಗೊಳಿಸಿದರು.

****************************